## ಹಿರಿಯ ಸಿವಿಲ್ ಜಡ್ಜ್‌ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.

**ಸಿ.ಸಿ. ಸಂಖ್ಯೆ 226/2016**

ಚಾಸಾಃ 3 ಫ್ರಾಸಾಃ4

| | | |
|---|---|---|
| ಹೆಸರು | : | ಶ್ರೀನಿವಾಸಯ್ಯ |
| ಗಂಡನ/ತಂದೆಯ ಹೆಸರು | : | ಮಾದಯ್ಯ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಶಿಕ್ಷಕ |
| ವಾಸ | : | ಸುಂಕದಕಟ್ಟೆ |

ದಿನಾಂಕ **06.01.2024** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ಚಾಸಾ-1 ನನ್ನ ಹೆಂಡತಿ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ದಿಃ31.12.2015 ರಂದು ಸಂಜೆ 4.00 ಗಂಟೆಯ ಸಮಯದಲ್ಲಿ ಸುಂಕದಕಟ್ಟೆಯ ತೋಟದ ಮನೆಯಲ್ಲಿ ನಾನು, ಚಾಸಾ-1 ಚಾಸಾ2, ಚಾಸಾ-4 ರವರು ಹಾಗೂ 1 ನೇ ಆರೋಪಿ ಇದ್ದಾಗ ಅಕ್ಕಿ ರಾಗಿ ವಿಚಾರದಲ್ಲಿ ಗಲಾಟೆಯಾಗಿ ಚಾಸಾ-1 ಮತ್ತು 1 ನೇ ಆರೋಪಿಗೂ ಗಲಾಟೆಯಾಗಿತ್ತು. ಆಗ 1 ನೇ ಆರೋಪಿರವರು ನ್ಯಾಯಾಲಯದ ಮುಂದೆ ಇರುವ ಮು ಮಾ 1 ರ ಕುಡುಗೋಲಿನಿಂದ ಚಾಸಾ1 ರವರ ಕೈಗೆ ಹೊಡೆದಿರುತ್ತಾರೆ. ಇದರಿಂದ ಚಾಸಾ1 ರವರಿಗೆ ರಕ್ತ ಗಾಯವಾಗಿತ್ತು ಅವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಸದರಿ ದಿನ ಸದರಿ ಗಲಾಟೆಯನ್ನು ಚಾಸಾ-4 ರವರು ಬಿಡಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು ಮಾ 1 ಅನ್ನು ನೋಡಿ ಗುರುತಿಸುತ್ತಾರೆ. ನಾನು ಈ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ  ಪರ ವಕೀಲರಿಂದಃ</u>

ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.